ವಿಜಯವಾಣಿ
ಕನ್ನಡಿಗರ ಧ್ವನಿ

ರಾಷ್ಟ್ರೀಯ ಕಾನೂನು ದಿನ ಮತ್ತು ಅಂತಾರಾಷ್ಟ್ರೀಯ ಮಾನವ ಹಕ್ಕು ದಿನದ ಅಂಗವಾಗಿ ಜೈನ್ ವಿವಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗಾಗಿ 'ಭಾರತದಲ್ಲಿ ಖಾಸಗೀತನದ ಹಕ್ಕಿನ ಭವಿಷ್ಯ' ವಿಷಯ ಕುರಿತು ಪ್ರಬಂಧ ಸ್ಪರ್ಧೆ ಆಯೋಜಿಸಿದೆ. ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಶುಲ್ಕವಿಲ್ಲ. ವಿಜೇತರಿಗೆ ಪ್ರಥಮ (10 ಸಾವಿರ ರೂ.), ದ್ವಿತೀಯ (7 ಸಾವಿರ ರೂ.) ಮತ್ತು ತೃತೀಯ (5 ಸಾವಿರ ರೂ.) ಬಹುಮಾನ ನೀಡಲಾಗುತ್ತದೆ. ಪ್ರಬಂಧವು ಐದು ಸಾವಿರ ಪದಗಳ ಮಿತಿಯಲ್ಲಿ ಇರಬೇಕು. ವಿದ್ಯಾರ್ಥಿಯ ಹೆಸರು, ವಿಳಾಸ ಮತ್ತು ಸಂಪರ್ಕಕ್ಕೆ ಸಂಬಂಧಿಸಿದ ಮಾಹಿತಿ ಇರಬೇಕು. ವಿದ್ಯಾರ್ಥಿ ಎಂಬುದನ್ನು ರುಜುವಾತು ಮಾಡಲು ಗುರುತಿನ ಪತ್ರ ಅಥವಾ ಪ್ರಾಚಾರ್ಯರಿಂದ ದೃಢೀಕೃತ ದಾಖಲೆ ಸಲ್ಲಿಸಬೇಕು. ಪ್ರಬಂಧಗಳನ್ನು ಕಳಿಸಲು ಡಿ.31 ಕೊನೆಯ ದಿನ. ವಿವರಕ್ಕೆ ದೂ: 080-27577091, www.jainuniversity.ac.in ವೆಬ್‌ಸೈಟ್‌ಗೆ ವೀಕ್ಷಿಸಬಹುದು.